ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University
ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

News about Organic Farming of KSRDPR University published in “Udayavani” and “Kittur Karnataka “ Daily Kannada News Paper published date:04-10-2020

“Udayavani” Daily Kannada Newspaper

ಸುವರ್ಣ ಸಂಭ್ರಮ
ಉದಯವಾಣಿ
1970 ರಿಂದ
ನಮ್ಮ ಹೃದಯವಾಣಿ • ನಮ್ಮ ಉದಯವಾಣಿ

ಸಾವಯವ ಕೃಷಿಯತ್ತ ಗ್ರಾಮೀಣಾಭಿವೃದ್ಧಿ ವಿವಿ ಹೆಜ್ಜೆ

• ವೀರೇಂದ್ರ ನಾಗಲದಿನ್ನಿ

- ಸ್ನಾತಕೋತ್ತರ ವಿಭಾಗಗಳಿಗೆ ತಲಾ ಇಪ್ಪತ್ತು ಗುಂಟೆ ಭೂಮಿ
- ವಿವಿಧ ಬೆಳೆ ಪ್ರಯೋಗ ನಡೆಸುತ್ತಿರುವ ವಿದ್ಯಾರ್ಥಿಗಳು
- ರಸಗೊಬ್ಬರ, ಕೀಟನಾಶಕಗಳ ಹಾವಳಿ ತಪ್ಪಿಸಲು 'ದೇಸಿ' ಯತ್ನ

ಗದಗ: ನಾಡಿನ ರೈತರನ್ನು 'ಸಾವಯವ' ಕೃಷಿಯತ್ತ ಸೆಳೆಯಲು ಮುಂದಾಗಿರುವ ಇಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ 'ದೇಸಿ' ಸಂಶೋಧನಾತ್ಮಕ ಪ್ರಯೋಗಕ್ಕೆ ಕೈ ಹಾಕಿದೆ. ಇದಕ್ಕಾಗಿ ತನ್ನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಿದೆ.

ಕೃಷಿಯಲ್ಲಿ ಕೀಟನಾಶಕ, ರಸಗೊಬ್ಬರಗಳ ಬಳಕೆ ತಪ್ಪಿಸುವುದು, ಅನಿಶ್ಚಿತ ಮಳೆಯಿಂದಾಗಿ ಸಂಕಷ್ಟ ಕ್ಕೊಳಗಾಗಿರುವ ರೈತರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಅವರನ್ನು ಸಾವಯವ ಕೃಷಿಯತ್ತ ಆಕರ್ಷಿಸುವುದು ದೇಸಿ ಪ್ರಯೋಗದ ಮುಖ್ಯ ಉದ್ದೇಶವಾಗಿದೆ.

2016ರಲ್ಲಿ ಆರಂಭಗೊಂಡಿರುವ ಈ ವಿವಿಯಲ್ಲಿ ಒಟ್ಟು 10 ಸ್ನಾತಕೋತ್ತರ ಪದವಿಗಳಿದ್ದು ನೂರಾರು ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ಬಳಸಿಕೊಂಡು ಕೃಷಿ ಕಾರ್ಯದಲ್ಲಿ ತೊಡಗಿದೆ. ಸಮೀಪದ ನಾಗಾವಿ, ಕಳಸಾಪುರ ಮಧ್ಯೆ ಸುಮಾರು 350 ಎಕರೆ ಪ್ರದೇಶದಲ್ಲಿನೂತನ ಕ್ಯಾಂಪಸ್‌ನ ಸುಮಾರು ಆರು ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಪ್ರತಿಯೊಂದು ಸ್ನಾತಕೋತ್ತರ ಪದವಿಯ ಪ್ರತಿಯೊಂದು ವಿಭಾಗಕ್ಕೆ ತಲಾ 20 ಗುಂಟೆ ಜಮೀನು ಹಂಚಿಕೆ ಮಾಡಲಾಗಿದೆ. ಆಯಾ ವಿಭಾಗದ ಮುಖ್ಯಸ್ಥರ ಮಾರ್ಗದರ್ಶನದಲ್ಲಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಯಾವುದಾದರೊಂದು ಬೆಳೆ ಬೆಳೆಯಬೇಕು. ಇದರಿಂದ ಬರುವ ಸಂಶೋಧನಾತ್ಮಕ ಫಲಿತಾಂಶವನ್ನು ರೈತರಿಗೆ ಮನವರಿಕೆ ಮಾಡುವ ಉದ್ದೇಶದೊಂದಿಗೆ ದೇಸಿ (ಪ್ರದರ್ಶಿಸಬಹುದಾದ ಸುಸ್ಥಿರ ಸ್ಕೇಲೇಬಲ್ ಉಪಕ್ರಮ) ಎಂಬ ಪ್ರಯೋಗ ಕೈಗೊಂಡಿದೆ.

ನಾಗಾವಿ ಸಮೀಪದ ಗ್ರಾಮೀಣಾಭಿವೃದ್ಧಿವಿವಿ ಜಮೀನಿನಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿರುವ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು.

ಕೃಷಿಯಲ್ಲಿ ಪ್ರಾಧ್ಯಾಪಕ, ವಿದ್ಯಾರ್ಥಿಗಳು

ಬೆಳೆಗೆ ತಗುಲುವ ವೆಚ್ಚವನ್ನು ವಿವಿಯೇ ಭರಿಸುತ್ತದೆ. ಬಿತ್ತನೆ, ರಂಟೆ, ಕುಂಟೆ, ಎಡೆ ಹೊಡೆಯುವುದು ಸೇರಿದಂತೆ ಕೃಷಿಯ ಕೆಲಸಗಳಿಗೆ ಸಮೀಪದ ರೈತರನ್ನು ಬಳಸಿಕೊಳ್ಳಲಾಗುತ್ತಿದೆ. ಇನ್ನುಳಿದಂತೆ ಜಮೀನಿನಲ್ಲಿ ಕಳೆ ಕೀಳುವುದು, ಜಮೀನು ಸ್ವಚ್ಛಗೊಳಿಸುವುದು, ಬೆಳೆಗಳ ಮೇಲೆ ನಿಗಾ ವಹಿಸುವುದು ಆಯಾ ಅಧ್ಯಯನ ವಿಭಾಗದವರ ಹೊಣೆ. ಆದಕ್ಕಾಗಿ 10 ವಿಭಾಗಗಳಿಂದ ಪ್ರತಿನಿತ್ಯ ತಲಾ ಒಬ್ಬರು ಜಮೀನಿಗೆ ಭೇಟಿ ನೀಡಿದರೆ; ಪ್ರತಿ ತಿಂಗಳ 2ನೇ ಶನಿವಾರ ವಿಭಾಗದ ಎಲ್ಲರೂ ಜಮೀನಿನಲ್ಲಿ ಶ್ರಮದಾನ ಮಾಡುತ್ತಿದ್ದಾರೆ. ಅವರಿಗೆ ಕೃಷಿ, ತೋಟಗಾರಿಕೆ ಮತ್ತು ಸ್ಥಳೀಯ ಪ್ರಗತಿಪರ ರೈತರೂ ಜಮೀನುಗಳಿಗೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸಸ್ಯ ಪಾಲನಾ ಕೇಂದ್ರ, ಪಶುಸಂಗೋಪನೆ ಆರಂಭವಾಗಲಿದೆ ಎನ್ನುತ್ತಾರೆ 'ದೇಸಿ' ಪ್ರಾಜೆಕ್ಟ್ ಉಸ್ತುವಾರಿ ಪ್ರೊ।ರಂಗಪ್ಪ

ಯಾವ್ಯಾವ ಬೆಳೆ ಬೆಳೆಯಲಾಗಿದೆ: ಕಳೆದೆರಡು ತಿಂಗಳಿಂದ ಕ್ಯಾಂಪಸ್ ಆವರಣದಲ್ಲಿ ಕೃಷಿ ಚಟುವಟಿಕೆಗಳು ಜೋರಾಗಿವೆ. ಗೋವಿನಜೋಳ, ಅಶ್ವಗಂಧ, ನವಣೆ, ಸೂರ್ಯಕಾಂತಿ, ಹಸಿಮೆಣಸಿನಕಾಯಿ, ಟೊಮೆಟೋ, ಚೆಂಡುಹೂವು, ಸೇವಂತಿಗೆ, ಬೆಂಗಳೂರು ರಾಜ ಹೂವು ಹಾಗೂ 50 ಸಿಂಬೆ ಹಣ್ಣು 50 ನುಗ್ಗೆಕಾಯಿ ಗಿಡಗಳನ್ನು ಬೆಳಸಲಾಗುತ್ತಿದೆ. ಈ ಪೈಕಿ ಮೆಣಸಿನಕಾಯಿ ಹಾಗೂ ಟೊಮೆಟೋ ಉತ್ತಮವಾಗಿ ಬೆಳೆದಿದ್ದು, ಅದನ್ನು ಸೇವಾಭಾವನೆಯೊಂದಿಗೆ ಇಲ್ಲಿನ ವೀರೇಶ್ವರ ಪುಣ್ಯಾಶ್ರಮ, ವಿವಿಧ ವೃದ್ಧಾಶ್ರಮಗಳಿಗೆ ಉಚಿತವಾಗಿ ನೀಡಲಾಗಿದೆ.

ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದ ಮೂಲ ಉದ್ದೇಶಗಳಲ್ಲಿ ಜನೋಪಯೋಗಿ ಕೆಲಸ ಮತ್ತು ವಿದ್ಯಾರ್ಥಿಗಳ ಕಲಿಕೆ ಪ್ರಮುಖವಾಗಿವೆ. ಗ್ರಾಮೀಣ ಕಲ್ಪನೆಯೊಂದಿಗೆ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಲಾಗಿದೆ. ಸಾವಯವ ಮತ್ತು ಸುಸ್ಥಿರ ಕೃಷಿ ಇಂದಿನ ದಿನಮಾನಕ್ಕೆ ಅತ್ಯಗತ್ಯವಾಗಿದೆ.

• ಪ್ರೊ।ವಿಷ್ಣುಕಾಂತ ಎಸ್. ಚಟಪಲ್ಲಿ, ಗ್ರಾವಿವಿ ಕುಲಪತಿ

Davanagere Edition
Oct 4, 2020 Page No. 1
Powered by : eReleGo.com

Kittur Karnataka" Daily Kannada Newspaper

ಕ.ರಾ.ಗ್ರಾ.ಪಂ. ವಿವಿಯಲ್ಲಿ

ಸಾವಯವ ಹಾಗೂ ಸುಸ್ಥಿರ ಕೃಷಿಯ ವಿನೂತನ ಪ್ರಯತ್ನ

ಗದಗ, ೩ : ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನ ಜಮೀನಿನಲ್ಲಿ ಸಾವಯವ ಹಾಗೂ ಸುಸ್ಥಿರ ಕೃಷಿಯ ವಿನೂತನ ಪ್ರಯತ್ನ ಮತ್ತು ಪ್ರಯೋಗವನ್ನು ನಡೆಸಲಾಗುತ್ತಿದೆ. ಗಾಂಧೀಜಿಯವರ ತತ್ವ, ಚಿಂತನೆಗಳಿಗೆ ಹಾಗೂ ಗ್ರಾಮೀಣಾಭಿವೃದ್ಧಿ ಪರಿಕಲ್ಪನೆಗಳಿಗೆ ಬದ್ಧವಾಗಿರುವ ವಿಶ್ವವಿದ್ಯಾಲಯವು, ಗದಗ ಜಿಲ್ಲೆಯ ಕೃಷಿಕರನ್ನು ಸಹಜ ಕೃಷಿಯತ್ತ ಆಕರ್ಷಿಸಲು ಮತ್ತು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪಠ್ಯದ ಜೊತೆಗೆ ಪ್ರಾಯೋಗಿಕ ಜ್ಞಾನವನ್ನು ಉಣಬಡಿಸಲು ಕ್ಯಾಂಪ್‌ಸ್‌ನ ಸುಮಾರು ೬ ಎಕರೆ ಜಮೀನಿನಲ್ಲಿ ಸುಸ್ಥಿರ ಕೃಷಿಯ ಪ್ರಯೋಗವನ್ನು ಕೈಗೊಂಡಿದೆ.

ವಿಶ್ವವಿದ್ಯಾಲಯದ ವಿವಿಧ ೧೦ ಅಧ್ಯಯನ ವಿಭಾಗಗಳಿಗೆ ಈ ಕೃಷಿ ಭೂಮಿಯನ್ನು ೨೦ ಗುಂಟೆಯಂತೆ ಹಂಚಿಕೆ ಮಾಡಲಾಗಿದೆ. ಈ ವಿಭಾಗಗಳು ಸಾವಯವ ಮತ್ತು ಸುಸ್ಥಿರ ಕೃಷಿ ಚಟುವಟಿಕೆಯನ್ನು ಕೈಗೊಳ್ಳುವ ಹಾಗೂ ಈ ಸಂಬಂಧ ಪ್ರಯೋಗವನ್ನು ನಡೆಸುವ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ. ಈ ವಿನೂತನ ಪ್ರಯತ್ನಕ್ಕೆ "ದೇಸೀ" (Dessi) Demonstrable, Sustainable, Scalable Initiative ಯೋಜನೆ ಎಂದು ಕರೆಯಲಾಗಿದೆ.

ಪ್ರಸ್ತುತ ದಿನಮಾನದ ಕೃಷಿಯಲ್ಲಿನ ವಿಪರೀತ ಕೀಟನಾಶಕ, ರಾಸಾಯನಿಕ ಗೊಬ್ಬರಗಳ ಬಳಕೆಯು ನಮ್ಮ ಪರಿಸರದ ಮೇಲೆ ಮಾತ್ರವಲ್ಲದೆ ಕೃಷಿಕರ ಹಾಗೂ ಆಹಾರೋತ್ಪಾದನೆಯ ಮೇಲೂ ದುಷ್ಪರಿಣಾಮವನ್ನು ಬೀರುತ್ತದೆ. ಅನಿಶ್ಚಿತ ಮಳೆ, ಹವಮಾನ ವೈಪರಿತ್ಯಗಳಿಂದ ಕೃಷಿ ಮತ್ತು ಕೃಷಿ ಉತ್ಪಾದನೆಯು ಸುಸ್ಥಿರತೆಯನ್ನು ಕಳೆದುಕೊಳ್ಳುತ್ತದೆ. ಇದರಿಂದ ದೇಸೀ ಕೃಷಿಪದ್ಧತಿಗೆ ಹಿನ್ನಡೆಯಾಗಿದೆ.

ಈ ಹಿನ್ನಲೆಯ ಆಧಾರಿತವಾಗಿ ವಿಶ್ವವಿದ್ಯಾಲಯು ದೇಸೀ ಕಾರ್ಯ ಯೋಜನೆಯ ಅಡಿಯಲ್ಲಿ ಸಾವಯವ ಹಾಗೂ ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಮತ್ತು ಕೃಷಿಯೊಂದು ಪ್ರಾಯೋಗಶೀಲತೆಯ ಕ್ಷೇತ್ರ ಎಂಬುವುದನ್ನು ವಿದ್ಯಾರ್ಥಿಗಳಲ್ಲಿ ಅನುಭವ ಮೂಡಿಸುವ ನಿಟ್ಟನಲ್ಲಿ ಸಹಜ ಹಾಗೂ ಸುಸ್ಥಿರ ಕೃಷಿಯ ಪ್ರಯತ್ನ ಮತ್ತು ಪ್ರಯೋಗಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ದಿಸೆಯಲ್ಲಿ ಇದರ ವ್ಯವಸ್ಥಿತ ಪ್ರತಿಫಲ, ಯಶಸ್ವಿಗಾಗಿ ಶ್ರಮವನ್ನು ವಹಿಸುತ್ತಿದೆ.

ವಿಶ್ವವಿದ್ಯಾಲಯವು ಈ ಕೃಷಿ ಜಮೀನಿನಲ್ಲಿ ಸಮಗ್ರ ಕೃಷಿ ಚಟುವಟಿಕೆಗಳಾದ ಬೆಳೆ ಉತ್ಪಾದನೆ, ಹೈನುಗಾರಿಕೆ, ಜೈವಿಕ ಅನಿಲ ಉತ್ಪಾದನೆ ಮತ್ತು ಎರೆಹುಳು ಗೊಬ್ಬರ ತಂತ್ರಗಾರಿಕೆಯನ್ನೂ ಕೈಗೊಂಡಿದೆ. ಇದರೊಂದಿಗೆ ಕೃಷಿಯನ್ನು ಒಂದು ಸುಸ್ಥಿರ ಮತ್ತು ಸಕ್ರೀಯ ಉದ್ಯಮವನ್ನಾಗಿಸುವ ದುಷ್ಟಿಕೋನವನ್ನು ಹೊಂದಿ, ಆಸಕ್ತ ಕೃಷಿಕರಲ್ಲಿ, ವಿದ್ಯಾರ್ಥಿಗಳಲ್ಲಿ ಮತ್ತು ಪ್ರಾಧ್ಯಾಪಕರಲ್ಲಿ ಈ ಕುರಿತು ಜಾಗೃತಿಯನ್ನು ಮೂಡಿಸುತ್ತಿದೆ. ಅಲ್ಲದೇ, ಸುಸ್ಥಿರ ಕೃಷಿ ಮಾಡುವ ಹುಮ್ಮಸ್ಸು ನೀಡಿ ಕೃಷಿಕರಲ್ಲದವರಿಗೂ ಕೃಷಿ ಕಾರ್ಯ ಮಾಡಬೇಕು ಎಂಬ ಉತ್ಸಾಹ ಮೂಡಿಸುತ್ತಿದೆ.

(ಸಿನೇ ಪುಟಕ್ಕೆ)

(ಮೊನಲನೇ ಪುಟದಿಂದ ಬಂದುದು)

ಸಾವಯವ ಹಾಗೂ ಸುಸ್ಥಿರ ಕೃಷಿಯ...

ವಿಶ್ವವಿದ್ಯಾಲಯದ ಹತ್ತೂ ಅಧ್ಯಯನ ವಿಭಾಗದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಇತರೆ ಸಿಬ್ಬಂದಿವರ್ಗದವರು ಈ ಕಾರ್ಯ ಯೋಜನೆಯಲ್ಲಿ ಸಕ್ರೀಯವಾಗಿ ಭಾಗಿಯಾಗಿ, ತಮಗೆ ವಹಿಸಿದ ಜಮೀನಿನ ಭಾಗಗಳಲ್ಲಿ ನಮ್ಮ ಪರಿಸರಕ್ಕೆ ಸಹಜವಾಗಿ ಹೊಂದಿಕೊಳ್ಳಬಹುದಾದ ದೇಸೀ ತಳಿಗಳ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವುಗಳಲ್ಲಿ ಔಷಧಿ ಸಸ್ಯಗಳು, ತರಕಾರಿ, ಸಿರಿಧಾನ್ಯಗಳು ಮತ್ತು ಮಸಲಾ ಪದಾರ್ಥ ಬೆಳೆಗಳು ಪ್ರಮುಖವಾಗಿವೆ. ಈ ಕಾರ್ಯ ಯೋಜನೆಯ ಯಶಸ್ವಿ ಹಾಗೂ ಈ ಬೆಳೆಗಳ ಸಂಪೂರ್ಣ ನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿ ವರ್ಗವು ಪ್ರತಿ ತಿಂಗಳು ಎರಡನೇಯ ಶನಿವಾರದಂದು 'ದೇಸೀ ದಿವಸ' ಎಂಬ ಆಚರಣೆಯ ಭಾಗವಾಗಿ ಈ ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ. ಈ ಎಲ್ಲಾ ಕಾರ್ಯಚಟುವಟಿಕೆ ಕೃಷಿಕರಿಗೆ ಮತ್ತು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಮಟ್ಟದ ಲಾಭವಾಗಬೇಕು ಎಂಬುವುದೇ ವಿಶ್ವವಿದ್ಯಾಲಯದ ಮಹೋನ್ನತ ಉದ್ದೇಶ ಮತ್ತು ಆಶಯವಾಗಿದೆ.

'ಕುಲಪತಿಗಳ ದೂರದೃಷ್ಟಿಕೋನದಿಂದ ಕೈಗೊಳ್ಳಲಾಗುತ್ತಿರುವ ಪ್ರಸ್ತುತ ಚಟುವಟಿಕೆಯು ಮುಂದೆ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವಾಗಲಿದೆ. **ಕುಲಸಚಿವರು, ಕೆ.ಎಸ್.ಆರ್.ಡಿ.ಪಿ.ಆರ್. ವಿಶ್ವವಿದ್ಯಾಲಯ, ಗದಗ.**

'ಕೃಷಿಕರ ಹಾಗೂ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಸುಸ್ಥಿರ ಕೃಷಿ ಅವಶ್ಯಕವಾಗಿದೆ. ಈ ಹಿನ್ನಲೆಯಲ್ಲಿ ಸಾವಯವ ಮತ್ತು ಸುಸ್ಥಿರ ಕೃಷಿಯ ಪ್ರಯೋಗವನ್ನು ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಯ ಭಾಗವಾಗಿ ಕೈಗೊಳ್ಳಲಾಗಿದೆ.

–ಕುಲಪತಿಗಳು, ಕೆ.ಎಸ್. ಆರ್.ಡಿ.ಪಿ.ಆರ್.ವಿಶ್ವವಿದ್ಯಾಲಯ, ಗದಗ.